ನಾಗಮಂಗಲ ಮೈಲಾರ ಪಟ್ಟಣ ರಸ್ತೆ ಅಭಿವೃದ್ಧಿ	21.85	ಪೂರ್ಣಗೊಂಡಿದೆ
ಆರ್.ಐ.ಡಿ.ಎಫ್ 3		
ವಳಗೆರೆಪುರದಿಂದ ಚಿಕ್ಕಜಟಕ ರಸ್ತೆ ಅಭಿವೃದ್ಧಿ	12.00	ಪೂರ್ಣಗೊಂಡಿದೆ
ನಾಗಮಂಗಲ ಮೈಲಾರ ಪಟ್ಟಣ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ 48ನ್ನು ಅಂಕನಹಳ್ಳಿ ಮಾರ್ಗ ಸೇರುವ ರಸ್ತೆಯ ಅಭಿವೃದ್ಧಿ	39.50	ಪೂರ್ಣಗೊಂಡಿದೆ
ನಾಗಮಂಗಲ ಶ್ರವಣಬೆಳಗೊಳ ರಸ್ತೆಯಲ್ಲಿ ಅದ್ದಿಹಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ	54.55	ಸೇತುವೆ ಕಾಮಗಾರಿ ಪೂರ್ಣಗೊಂಡಿದ್ದು, ರಸ್ತೆ ಡಾಂಬರೀಕರಣ ಬಾಕಿ ಇರುತ್ತದೆ.

ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿಯ ರಸ್ತೆಗಳ ದುರಸ್ತಿ.

528(629)

ಶ್ರೀ ಚಲುವರಾಯ ಸ್ವಾಮಿ.ಎನ್.(ನಾಗಮಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ನಾಗಮಂಗಲ ತಾಲ್ಲೂಕಿನಲ್ಲಿ ದೇವಲಾಪುರ ಹೋಬಳಿಯಲ್ಲಿ ಕೆಲವು ಗ್ರಾಮಗಳು ಕಬ್ಬು ಬೆಳೆಗಾರರ ಪ್ರದೇಶವಾಗಿದ್ದು, ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸುವ ರಸ್ತೆಗಳು ಬಹಳ ದುರಸ್ತಿಯಲ್ಲಿದ್ದು, ಇವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ; ಕೈಗೊಳ್ಳದಿದ್ದಲ್ಲಿ ಈಗಲಾದರೂ ರಸ್ತೆ ಅಭಿವೃದ್ಧಿಪಡಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ನಾಗಮಂಗಲ ತಾಲ್ಲೂಕಿನಲ್ಲಿ ದೇವಲಾಪುರ ಹೋಬಳಿಯ ಕೆಲವು ಗ್ರಾಮಗಳ

ಪ್ರದೇಶದಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸಲು ಬಳಸುವ ಎರಡು ಲೋಕೋಪಯೋಗಿ ಇಲಾಖೆಯ ರಸ್ತೆಗಳು ಹಾಳಾಗಿದ್ದು, ಇವುಗಳಲ್ಲಿನ ಗುಂಡಿ ಮುಚ್ಚುವುದು, ಮರು ಡಾಂಬರು ಮತ್ತು ಅಗತ್ತವಿದ್ದ ಸ್ಥಳಗಳಲ್ಲಿ ರಸ್ತೆಬದಿ ಚರಂಡಿ ಮಾಡಿ, ರಸ್ತೆಗಳನ್ನು ರೂ.7.23 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗಿದೆ.

ರಾಜ್ಯದಲ್ಲಿರುವ ಮಿನಿ ಕ್ರೀಡಾಂಗಣಗಳು.

529(740)

ಶ್ರೀ ಚಲುವರಾಯಸ್ವಾಮಿ ಎನ್.(ನಾಗಮಂಗಲ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಮಿನಿ ಕ್ರೀಡಾಂಗಣಗಳು ಇವೆ ಹಾಗೂ ಹೊಸದಾಗಿ ಮಂಜೂರಾಗಿರುವ ಹೊಸ ಕ್ರೀಡಾಂಗಣಗಳೆಷ್ಟು; ತಾಲ್ಲೂಕುವಾರು ವಿವರ ನೀಡುವುದು;

ಆ) ನಾಗಮಂಗಲ ತಾಲ್ಲೂಕಿನಲ್ಲಿ ಮಿನಿ ಕ್ರೀಡಾಂಗಣವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವಾಗ ಪ್ರಾರಂಭಿಸಲಾಗುವುದು?

ಇ) ಗ್ರಾಮಾಂತರ ಪ್ರದೇಶದಲ್ಲಿರುವ ಮಕ್ಕಳಿಗೆ ಹಾಗೂ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ತಮ್ಮ ಇಲಾಖೆಯಿಂದ ಯಾವ ರೀತಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಅಥವಾ ಕ್ರೀಡಾ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆಯೇ; ವಿವರ ನೀಡುವುದು;

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಹಾಲಿ ಯಾವುದೇ ತಾಲ್ಲೂಕಿನಲ್ಲಿ ಮಿನಿ ಕ್ರೀಡಾಂಗಣ ಇರುವುದಿಲ್ಲ.

ಆ) ನಾಗಮಂಗಲದಲ್ಲಿ ಸಣ್ಣ ಕ್ರೀಡಾಂಗಣ ನಿರ್ಮಿಸುವ ಸಾಧ್ಯತೆ ಕುರಿತು ತಾಲ್ಲೂಕು ಕ್ರೀಡಾಂಗಣ ಸಮಿತಿಯು ಪರಿಶೀಲಿಸುತ್ತಿರುವ ಕುರಿತು ಹಾಗೂ ಸದರಿ ಸಮಿತಿಯು ಸೂಕ್ತ ನಿರ್ಣಯ ಕೈಗೊಂಡು ಪ್ರಸ್ತಾವ ಸಲ್ಲಿಸಿದ ನಂತರ ಈ ಯೋಜನೆಯನ್ನು ಮಂಜೂರು ಮಾಡುವ ದಿಸೆಯಲ್ಲಿ ಪರಿಗಣಿಸಲಾಗುವುದೆಂದು